ಸುಸ್ತಾದಂಗ ಕಂಡ್ಳು'. 'ನಾನು ದೊಡ್ಡಪ್ಪನನ್ನು ಕಾಣ್ಬೇಕು. ಒಂದು ಸಲ ಕರಕೊಂಡು ಹೋಗು' ಅಂತ ಕೇಳಿದಳು.

ಚಂದ್ರಕಾಂತಯ್ಯನಿಗೆ ಚಂದ್ರಮತಿ ವಾರ್ಡನ್ ಪರಿಚಯವಿದ್ದಳು. ಗೌರವವಿತ್ತು. ಆದ್ರೆ ಸಣ್ಣವರು ಬಳಸಿಕೊಂಡು ಮಠವನ್ನು ಮೈಲಿಗೆ ಮಾಡಿದ್ದರು. ಆಕಿ ಮ್ಯಾಲಿದ್ದ ಗೌರವ ಇಳಿದಿತ್ತು. ಆದರೂ ಚಂದ್ರಮತಿ ಒತ್ತಡಕ್ಕೆ ಮಣಿದಿದ್ದಾಳೆಂದು ಲೆಕ್ಕ ಹಾಕಿದ ಬಗ್ಗೆ ಚಂದ್ರಕಾಂತಯ್ಯ ನಿಷ್ಠುರವಾದಿ ಎಂದು ತಿಳಿದಿದ್ದ ಆಕೆ ಹೆದರಿದ್ದಳು.

ಶಿವಲಿಂಗನನ್ನು ಚಂದ್ರಕಾಂತಯ್ಯನೇ ಮಠಕ್ಕೆ ಕಳಿಸಿ ಕೊಟ್ಟ. ಶಿವಲಿಂಗ ಹೋಗುವ ಮುನ್ನ 'ಶಾಂತಪ್ಪನ ಮಗ್ಳು ಸುಜಾತಾ ಮತ್ತೆ ಸಾಲಿಬಿಟ್ಟು ಮನ್ಯಾಗ ಕುಂತಾಳ. ಹೋಗಿ ಮಾತಾಡ್ಸಿ ಬಾ ದೊಡ್ಡಪ್ಪ' ಎಂದು ಹೇಳಿ ಹೋಗಿದ್ದ.

...ಬಡಿಗೇರ ಶಾಂತಪ್ಪನ ಮಗ್ಳು ಹೈಸ್ಕೂಲ್‌ನಲ್ಲಿ ಓದುತ್ತಿದ್ದಳು. ಇದ್ದಕ್ಕಿದ್ದ ಹಾಗೆ ಸಾಲೆ ಬಿಟ್ಟು ಮನ್ಯಾಗಿದ್ದುದು ಚಂದ್ರಕಾಂತಯ್ಯನಿಗೆ ತಿಳಿದಿತ್ತು. ಒಂದು ದಿನ ನೇರ ಮನೆಗೆ ಹೋಗಿ ವಿಚಾರಿಸಿದ. ಶಾಂತಪ್ಪ- ದಾನಮ್ಮ ದಂಪತಿಗಳು ಚಿಂತಾಕ್ರಾಂತರಾಗಿ ಕುಂತರೇ ಹೊರತು ವಿಷಯ ಹೇಳಲಿಲ್ಲ. ಚಂದ್ರಕಾಂತಯ್ಯ 'ಸಾಲಿಗೆ ಹೋಗ್ಲಿ, ಬಿಡ್ಲಿ ಅದು ಬ್ಯಾಡ. ಆದ್ರೆ ಸುಜಾತಾಗ ಏನಾಯ್ತು ಸಾಲಿ ಬಿಡಾಕ?' ಎಂದು ಗಟ್ಟಿಯಾಗಿ ಕೇಳಿದಾಗ, 'ನಾವು ಬಡವರು! ಬಾಳ್ವೆ ಮಾಡಿಕೊಂಡು ಬದುಕ್ತಿವಿ! ದೊಡ್ಡ ವ್ಯಕ್ತಿಗಳನ್ನ ಎದುರುಗೊಳ್ಳೋದು ನಮ್ಗ ಆಗಾದಿಲ್ಲ. ಹೆಣ್ಣ ಕೂಸು ನೊಂದಿತ್ತು ಅಂತ ಹೆದರಿಕೆ... ಕೊನೆಗೆ ಸುಜಾತಾಳನ್ನು ರಮಿಸಿ ಕೇಳಿದಾಗ 'ಹೆಡ್‌ಮಾಸ್ಟ್ರ, ತನ್ನ ರೂಮಿಗೆ ಕರೆಸಿ, ನನ್ನ ಮೈ ಸವರ್‍ತಾನ' ಎಂದು ಅತ್ತಳು. ತಾಳ್ಮೆಯಿಂದ ಕೇಳಿಕೊಂಡು ಎದ್ದ. 'ದೊಡ್ಡಣ್ಣ, ನೀನು ಸುಮ್ನಿದ್ದು ಬುಡು. ಯಾರನ್ನೂ ಪ್ರಶ್ನೆ ಮಾಡಬ್ಯಾಡ. ಮಾಡಿದ್ರ ನಮ್ಗ ಉಲ್ಟಾ ಹೊಡಿತದಣ್ಣ' ಎಂದು ದಂಪತಿಗಳಿಬ್ಬರು ಬೇಡಿಕೊಂಡರು.

ಚಂದ್ರಕಾಂತಯ್ಯ ನೇರವಾಗಿ ಸರ್ಕಾರಿ ಹೈಸ್ಕೂಲ್‌ಗೆ ಹೋಗಿ, ಹೆಡ್‌ಮಾಸ್ಟ್ರ ಖೋಲಿ ಮುಂದ ನಿಂತ. ಇದು ಸರ್ಕಾರಿ ಪ್ರೌಢಶಾಲೆ, ಖೋಲಿಯೊಳಗಿದ್ದವರೆಲ್ಲ ಹೊರಬಂದು ಚಂದ್ರಕಾಂತಯ್ಯನನ್ನು ನೋಡಿ ನಮಸ್ಕಾರ ಮಾಡ್ತಾ ಮಾತಾಡಿದರು. ಆಗಲೇ ಗುಜು ಗುಜು ಶುರುವಾಯ್ತು! ಚಂದ್ರಕಾಂತಯ್ಯ ಸಾಲಿಗೆ ಬಂದಾನಂದ್ರ ಏನೋ ನಡದಿರಬೇಕೆಂದು ತಿಳಿದರು.

'ಮಾಸ್ತ್ರೇ ಒಳಗ ಬರಬಹುದಾ?' ಎಂದು ಕೇಳಿದ. ಅವರು ಕರೆದ ಮೇಲೆ ಒಳ ಹೋಗಿ ಕುಂತು, 'ಸುಜಾತಾ, ಇಲ್ಲಿ ಒಂಬತ್ತನೇ ತರಗತಿಯಲ್ಲಿ ಓದುತ್ತಿದ್ದಾಳ ಮಾಸ್ತ್ರೇ. ಈಗ ಸಾಲಿಗೆ ಬರಲು ಹೆದರಿದ್ದಾಳ...' ಎಂದು ಹೇಳುತ್ತಿದ್ದಂತೆ.

'ನಿಮ್ಗೇನು ಸಂಬಂಧ? ಆ ಹುಡುಗಿ...'

'ನಮ್ಮೂರ ಹುಡುಗಿ. ಸಂಬಂಧ ಸಾಕಲ್ರಿ?' ಎಂದು ಹೇಳಿದ. 'ನಿಮ್ಮಿಂದ ಹೆದರಿ ಕುಂತಾಳ! ಮಾಸ್ತ್ರೇ ಪಾಠ ಮಾಡದು ಬುಟ್ಟು, ಅಲ್ಲದ ಕೆಲ್ಸಕ್ಕ ಕೈ ಹಾಕಿದ್ದೀರಿ. ಸುಜಾತಾ ಒಂದು ಕಂಪ್ಲೇಂಟ್ ಬರೆದು ಪೊಲೀಸ್ ಠಾಣೆಗೆ ಕೊಟ್ಟಳಂದ್ರ ನಿಮ್ಮ ಗತಿ ಏನಾಗ್ತದಂತ ಅರಿವು ಐತೇನು ನಿಮ್ಗ...?' ಚಂದ್ರಕಾಂತಯ್ಯನ ಮಾತಿಗೆ ಎದ್ದು ನಿಂತ ಹೆಡ್‌ಮಾಸ್ಟ್ರ 'ನನ್ನಿಂದ ತಪ್ಪಾಗಿದ್ರ ಕ್ಷಮಾ ಮಾಡ್ರಿ' ಎಂದು ಕೈಮುಗಿದು. ಚಂದ್ರಕಾಂತಯ್ಯ ತಾಳ್ಮೆಯಿಂದಲೇ ಎಚ್ಚರಿಸಿ 'ಹೆಣ್ಣುಮಕ್ಳು ಓದಲು ಸಾಲಿಗೆ ಬರುವುದೇ ಅಪರೂಪ. ಅಂತದರಾಗ ನಿಮ್ಮ ಕೆಟ್ಟ ಕಣ್ಣುಗಳು! ಇರ್‍ಲಿ, ಸುಜಾತಾಳನ್ನು ಸಾಲಿಗೆ ಬರುವಂಗ ವ್ಯವಸ್ಥೆ ಮಾಡ್ರಿ' ಎಂದು ಎದ್ದು ಬಂದಿದ್ದ. ಮುಂದಿನ ತರಗತಿಗೆ ಶಾಂತಪ್ಪ ಮಗಳನ್ನು ಮಠದ ವಸತಿ ಶಾಲೆಗೆ ಸೇರಿಸಿದ್ದನೆಂದು ತಿಳಿದಿತ್ತು.

ಚಂದ್ರಕಾಂತಯ್ಯನಿಗೆ ಮಾಂತಮ್ಮನ ಜತೆ ಮದುವೆಯಾದರೂ ಮೊದಲಿನಂತೆಯೇ ಹೊಲಮನೆ ಕೆಲ್ಸ ಮತ್ತು ಮಠದ ಮತ್ತು ದೊಡ್ಡವರ ಸೇವೆ ಮಾಡುತ್ತಿದ್ದ. ಮಾಂತಮ್ಮನೂ ಮಠದ ಸೇವೆಗೆ ನಿಂತಳು. ದೊಡ್ಡವರ ಸೂಚನೆಯಂತೆ ಇಷ್ಟಲಿಂಗ ಪೂಜೆ ಮಾಡುವ ಭಕ್ತರ ಮನೆಗಳಿಗೆ ಮಠದ ತೋಟದಲ್ಲಿದ್ದ ಬಿಲ್ವಪತ್ರಿಯನ್ನು ಮಡಿಯಿಂದ ಹರಿದು ತಂದು ನೀಡುವ ಕಾಯಕ ಶುರು ಮಾಡಿದ್ದಳು. ಅದಕ್ಕೆ ಭಕ್ತರು ನೀಡಿದ ಫಲವನ್ನು ಮಠದ ದಾಸೋಹಕ್ಕೆ ಒಪ್ಪಿಸುತ್ತಿದ್ದಳು. ದೊಡ್ಡವರು ಇರುವ ತನಕ ರಾತ್ರಿ ಗಂಡ- ಹೆಂಡತಿ ಮಠದ ದಾಸೋಹದಲ್ಲಿ ಪ್ರಸಾದ ಸ್ವೀಕರಿಸಿಯೇ ಮನೆಗೆ ಹೋಗುತ್ತಿದ್ದರು. ಚಂದ್ರಕಾಂತಯ್ಯ ವಿಧವೆ ಮಾಂತಮ್ಮನನ್ನು ದೊಡ್ಡವರ ಸಮ್ಮತಿಯಿಂದ ಮದುವೆ ಮಾಡಿಕೊಂಡ